ಚಂದ್ರಪ್ಪನವರು. ಕೊಡವೂರಿನ ನವದುರ್ಗಾ ಎಸ್ಟೇಟಿನ ಮಾಲಕರು. ಉದಾರ ದಾನಿಗಳು, ನಮ್ಮವರೇ' ಎಂಬುದಾಗಿ ಪರಿಚಯಿಸಿ, 'ಇವರು ಪ್ರೊ. ಭಾಸ್ಕರ್, ಭಾಸ್ಕರ್ ಬೆಳ್ಳಿಯಪ್ಪ. ಇತ್ತೀಚೆಗೆ ತೀರಿಹೋದ ಅಜ್ಜಿಕುಟ್ಟೀರ ಕಾವೇರಪ್ಪನವರ ಏಕೈಕ ಪುತ್ರ.

'ನಾ ಹೇಳಿದ್ನಲ್ಲ; ಹೌದೌದು. ಗೊತ್ತಾಯಿತು' ಕುಳಿತಲ್ಲಿಂದಲೇ ದೇಹವನ್ನು ತುಸು ಮೇಲಕ್ಕೆತ್ತಿ ಭಾಸ್ಕರ್‌ರ ಕೈಕುಲುಕಿದರು.

'ಅಮೇರಿಕದಿಂದ ಬಂದ ಮೇಲೆ ದೆಹಲಿಯಲ್ಲಿ ವಿಜ್ಞಾನಿಗಳಾಗಿದ್ದರು. ತಂದೆ ತೀರಿ ಹೋದ ಮೇಲೆ ಊರಿಗೆ ಬರೋ ಮನಸ್ಸು ಮಾಡಿದ್ದಾರೆ. ಕಾಫಿ ಎಲೆಗಳಿಂದ ಸಾವಿರಾರು ಸಸಿಗಳನ್ನು ಸೃಷ್ಟಿಸುವ ಅಪೂರ್ವ ಸಾಧನೆಯಲ್ಲಿ ತೊಡಗಿದ್ದಾರೆ. ಎಲೆಯ ಗಿಡ ಬೀಜದ ಗಿಡಕ್ಕಿಂತ ಹೆಚ್ಚು ಫಲಕಾರಿಯಾಗಬಹುದೆಂಬುದು ಇವರ ಪ್ರಧಾನ ಸಂಶೋಧನೆ. ಅದೇ ತಂತ್ರಜ್ಞಾನವನ್ನು ಇತರ ಸಸ್ಯಗಳಿಗೂ ಬಳಸಬಹುದಂತೆ. ಕಾಫಿ ಗಿಡಗಳ ನಡುವೆಯೇ ಇದ್ದುಕೊಂಡು ಸಂಶೋಧನೆ ಮುಂದುವರಿಸಬೇಕೆಂಬ ಅಭಿಲಾಷೆ ಇವರದು. ಇಲ್ಲಾದರೋ ಸಾಕಷ್ಟು ಸೌಕರ್ಯಗಳಿಲ್ಲ. ಒಳ್ಳೆಯ ಲ್ಯಾಬ್ ಇಲ್ಲ. ಪ್ರತ್ಯೇಕವಾದ ಏರ್ ಕಂಡಿಷನ್ಡ್ ಲ್ಯಾಬೊರೇಟರಿ ಬೇಕು, ಒಂದಷ್ಟು ಬೆಲೆಬಾಳುವ ಎಕ್ವಿಪ್‌ಮೆಂಟ್ಸ್ ಬೇಕು' – ಡಾ. ಚೆಂಗಪ್ಪನವರ ಮಾತನ್ನು ಮಧ್ಯದಲ್ಲೆ ಮುರಿದ ಚಂದ್ರಪ್ಪನವರು, 'ಸರಕಾರವನ್ನು ಕೇಳಿ ನೋಡಿ, ಹೇಗಿದ್ರೂ ನಮ್ಮದೇ ಸರಕಾರ ಇದೆಯಲ್ಲ' ಎಂದರು.

'ಅಷ್ಟೊಂದು ಮೊತ್ತವನ್ನು ಸರಕಾರ ಕೊಡಲು ಒಪ್ಪಾ ಇಲ್ಲ. ಮ್ಯಾಚಿಂಗ್ ಗ್ರಾಂಟ್ಸ್ ಅನ್ನು ನಾವು ಕೊಡಬಲ್ಲೆವಾದರೆ ಸರಕಾರ ಈ ಪ್ರಾಜೆಕ್ಟ್ ಬಗ್ಗೆ ಆಸ್ಥೆ ತೋರಿಸುವ ಸಾಧ್ಯತೆಯಿದೆ. ಅಷ್ಟೊಂದು ಮೊತ್ತ ಎಲ್ಲಿಂದ ಸಂಗ್ರಹಿಸೋದು?' ಎನ್ನುತ್ತಲೇ ಡಾ. ಚೆಂಗಪ್ಪ, ಚಂದ್ರಪ್ಪನವರ ಪ್ರತಿಕ್ರಿಯೆಗಾಗಿ ಕಾದರು.

'ಅಷ್ಟು ಅಂದರೆ?'

'ಸುಮಾರು ಐದು ಕೋಟಿ.'

'ಅಷ್ಟೆ ತಾನೆ? ಹೇಗಾದರೂ ಹೊಂದಿಸಿದರಾಯಿತು. ಆ ಜವಾಬ್ದಾರಿ ನನಗೆ ಬಿಡಿ. ಇಂಥವರು ಊರಲ್ಲೇ ಬಂದು ನೆಲೆಸಿ, ಸಂಶೋಧನೆ ಮುಂದುವರಿಸೋದೇ ದೊಡ್ಡ ವಿಚಾರ. ಇದರ ಮುಂದೆ ಐದು ಕೋಟಿ ಏನೂ ಅಲ್ಲ.'

'ಥ್ಯಾಂಕ್ಯೂ ಚಂದ್ರಪ್ಪನವರೆ, ಥ್ಯಾಂಕ್ಯೂ ವೆರಿ ಮಚ್' ಪ್ರೊ. ಭಾಸ್ಕರ್ ಹಾಗೂ ಡಾ. ಚೆಂಗಪ್ಪನವರು ಅಯಾಚಿತವಾಗಿ ಎದ್ದು ನಿಂತರು.

'ಯಾಕೆ? ಏನಾಯ್ತು? ಕೂತ್ಕೊಳ್ಳಿ' ಎಂದರು ಪ್ಲಾಂಟರ್ ಚಂದ್ರಪ್ಪನವರು.

ಪ್ರೊ. ಭಾಸ್ಕರ್‌ಗೆ ಪರಮಾಶ್ಚರ್ಯ! ಸರಿಯಾಗಿ ಪರಿಚಯ ಕೂಡ ಆಗಿಲ್ಲ, ಮುಖ ಕೊಟ್ಟು ಮಾತೂ ಆಡಿಲ್ಲ. ಇಷ್ಟೊಂದು ದೊಡ್ಡ ಹೊರೆಯನ್ನು ತಾವಾಗಿಯೇ ತಮ್ಮ ಮೇಲೆ ಹೇರಿಕೊಳ್ಳೋದುಂಟೆ?

'ದ್ಯಾಟ್ಸ್ ಆಲ್‌ರೈಟ್, ಪ್ರೊ. ಭಾಸ್ಕರ್ ನನಗೆ ನಿಮ್ಮ ಮನೆಯೋರೆಲ್ಲ ಗೊತ್ತು. ಗೊತ್ತೂಂತಂದ್ರೆ ಕೇವಲ ಗೊತ್ತಲ್ಲ. ನಿಮ್ಮನ್ನೂ ನೋಡಿದ್ದೆ, ಚಿಕ್ಕವರಿದ್ದಾಗ. ನೀವು ಊಟಿಗೆ ಕಲಿಯೋದಕ್ಕೇಂತ ಹೋದ್ರಲ್ಲ ಆಗ. ಮುಂದೆ ನೀವು ಮುಂದಿನ ವಿದ್ಯಾಭ್ಯಾಸಕ್ಕೆಂದು ಅಮೇರಿಕಕ್ಕೆ ಹೋಗಿಬಿಟ್ಟಿರಿ. ನಿಮ್ಮ ತಂದೆಯವರ ಕಾರ್ಯದಲ್ಲಿ ಒಮ್ಮೆ ಮಿಂಚಿನಂತೆ ಕಂಡಿರಿ. ಮಾತನಾಡಲಾಗಲಿಲ್ಲ. ಮಾತನಾಡುತ್ತಿದ್ದರೆ ಸುಮಾರು ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದ ನನ್ನೊಳಗೆ ಕಟ್ಟಿಟ್ಟಿದ್ದ ಋಣದ ಬುತ್ತಿಯನ್ನು ನಿಮ್ಮೆದುರು ಬಿಚ್ಚಿಟ್ಟು ಅಂದೇ ಹಗುರವಾಗಿ ಬಿಡುತ್ತಿದ್ದೆ.'

'ಅಂದರೆ?' ಪ್ರೊ. ಭಾಸ್ಕರ್‌ಗೆ ಇನ್ನೂ ಅಚ್ಚರಿ. ಡಾ. ಚೆಂಗಪ್ಪನವರಿಗೆ ದೂರದಲ್ಲೇನೋ ಮಿಂಚು ಹೊಳೆದಂತೆ ಭಾಸವಾಯಿತು.

'ಕನಿಷ್ಠ ಇಪ್ಪತ್ತು ವರ್ಷಗಳ ಹಿಂದಿನ ಮಾತು. ನೀವಾಗ ಅಮೇರಿಕದಲ್ಲಿ ಕಲಿಯುತ್ತಿದ್ದಿರಿ. ಚಿಕ್ಕಮಗಳೂರಲ್ಲಿ ಒಂದು ಎಸ್ಟೇಟ್ ಮಾರುವುದಕ್ಕಿತ್ತು. ಬ್ರಿಟಿಷರ ಕಾಲದ ಎಸ್ಟೇಟು. ಎಸ್ಟೇಟಿನ ಮಧ್ಯದಲ್ಲಿ ಒಂದೊಳ್ಳೆಯ ಬಂಗಲೆಯೂ ಇತ್ತು. ನನ್ನ ಬಳಿ ಅದನ್ನು ಕೊಳ್ಳುವಷ್ಟು ಹಣವಿರಲಿಲ್ಲ. ನಿಮ್ಮ ತಂದೆಯವರ ಬಳಿ ಹಣವಿತ್ತು. ಆದರೆ ಅವರಿಗೆ ಎಸ್ಟೇಟ್ ಕೊಳ್ಳುವ ಅಗತ್ಯವಿರಲಿಲ್ಲ, ಆಸಕ್ತಿಯೂ ಇರಲಿಲ್ಲ. ನೋಡಿಕೊಳ್ಳುವವರಿಲ್ಲದಿರುವಾಗ ತನಗ್ಯಾಕೆ ಇನ್ನೂ ಅನ್ನೋದು ಅವರ ಅಭಿಪ್ರಾಯ. ನನಗವರ ವಿಶೇಷ ಪರಿಚಯ ಇರಲಿಲ್ಲ. ಅವರ ನಡವಳಿಕೆ ಬಗ್ಗೆ ಸಾಕಷ್ಟು ಕೇಳಿ ಗೊತ್ತಿತ್ತು. ಧೈರ್ಯ ಮಾಡಿ ಹೋಗಿ ಕೇಳಿದೆ: 'ಕಡಿಮೆಗೆ ಸಿಗುತ್ತಿರುವ ಎಸ್ಟೇಟ್. ಸದ್ಯಕ್ಕೆ ನೀವು ಕೊಂಡುಕೊಳ್ಳಿ. ಹೇಗಾದರೂ ಮಾಡಿ ನಿಮ್ಮ ಸಾಲ ತೀರಿಸುತ್ತೇನೆ. ಸಾಲ ತೀರಿದ ಬಳಿಕೆನ್ನ ಹೆಸರಿಗೆ ಮಾಡಿಕೊಡಿ' ಎಂದೆ. ಅವರಿಗೆ ಏನು ತೋಚಿತೋ ಏನೋ. ಎಸ್ಟೇಟನ್ನು ಕೊಂಡುಕೊಂಡದ್ದು ಮಾತ್ರವಲ್ಲ, ನೇರವಾಗಿ ನನಗೇ ವಹಿಸಿಕೊಟ್ಟರು! ಒಂದೆರಡು ವರ್ಷಗಳಲ್ಲೇ ಸಾಲ ತೀರಿಸುವವನಿದ್ದೆ. ನಡುವೆ ಮೂರನೆಯವರ ಪ್ರವೇಶವಾಗಿ ನಾನು ಮೋಸಗಾರನೆಂಬ ತಪ್ಪು ಅಭಿಪ್ರಾಯ ನಿರ್ಮಾಣಗೊಂಡು ಇಬ್ಬರ ನಡುವೆ ಕಹಿ ಹರಡಿತು. ಹಣ ಕೊಡಲು ಹೋದಾಗ ನಿರಾಕರಿಸಿದರು. ಮೋಸಗಾರನೆಂದು ಬೊಬ್ಬೆ ಹಾಕಿದರು. ನನ್ನನ್ನು ನಾನು ಸಮರ್ಥಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮುಂದೆ ನಮ್ಮ ಸಂಬಂಧ ಕುದುರಲೇ ಇಲ್ಲ. ಚಿಕ್ಕಮಗಳೂರಿನ ಆ ಎಸ್ಟೇಟೇ ನನ್ನ ಇಂದಿನ ಸ್ಥಿತಿಗೆ ಕಾರಣ. ಅಲ್ಲಿಂದೀಚೆಗೆ ಅವರ ನೆನಪು ಋಣಭಾರವಾಗಿ ನನ್ನನ್ನು ಕಾಡುತ್ತಲೇ ಇತ್ತು...' ಚಂದ್ರಪ್ಪನವರು ಮಾತು ನಿಲ್ಲಿಸಿ ಒಂದು ಕ್ಷಣ ಮೂಕರಾದರು. ಕಣ್ಣುಗಳು ಮಂಜಾದವು. ತಕ್ಷಣ ಸುಧಾರಿಸಿಕೊಂಡರು.

'ಅಂದು ಅಪ್ಪನಿಗೆ ಸಲ್ಲಬೇಕಾದ್ದು ಇಂದು ಮಗನಿಗೆ ಸಲ್ಲುತ್ತಿದೆ. ಆ ಮೂಲಕ ನಾಡಿಗೆ ಸಲ್ಲುತ್ತಿದೆ. ಇದಕ್ಕಿಂತ ಇನ್ನೇನು ಬೇಕು?' ಚಂದ್ರಪ್ಪನವರ ಮಾತುಗಳು ಪ್ರೊ. ಭಾಸ್ಕರರನ್ನು ಬಹುದೂರ ಕೊಂಡೊಯ್ದುವು. ತಾನು ಅಮೇರಿಕಕ್ಕೆ ಹೋಗುತ್ತೇನೆಂದು ಹಟ ಹಿಡಿದಾಗ ತಂದೆ ಬಹಳವಾಗಿ ವಿರೋಧಿಸಿದ್ದರು. ಇದ್ದ ಒಬ್ಬನೇ ಮಗ, ಅವನೂ ಕೈತಪ್ಪಿದ ಎಂಬ ಕೊರಗು ಅವರನ್ನು ಬಹುವಾಗಿ ಬಳಲಿಸಿತ್ತು. ಅಮ್ಮನ ಪ್ರತಿಯೊಂದು ಪತ್ರದಲ್ಲೂ ಅಪ್ಪನ ಜೀವನೋತ್ಸಾಹ ಉಡುಗಿ ಹೋಗುತ್ತಿದ್ದ ಸುದ್ದಿ ತುಂಬಿರುತ್ತಿತ್ತು. ಅಮೇರಿಕದಿಂದ ತಾನು ದೆಹಲಿಗೆ ಬಂದು ನೆಲೆಸಿದ ಮೇಲೂ ತಂದೆಯ ಸಿಟ್ಟು ಶಮನಗೊಳ್ಳಲಿಲ್ಲ. ಅವರನ್ನೆದುರಿಸುವುದು ಸಾಧ್ಯವಾಗದೇ ಹೋದಾಗ ತಾನು ಊರಿಗೆ ಬರುವುದನ್ನೇ ಬಿಟ್ಟುಬಿಟ್ಟರು. ಪರಿಣಾಮವಾಗಿ ತಂದೆಯವರ ರೋಷ ಮಿತಿ ಮೀರಿತು. ಸಿಕ್ಕ ಸಿಕ್ಕವರಲ್ಲಿ ರೇಗಾಡುತ್ತಿದ್ದರು. ಮಗನಿಗೆ ಮದುವೆ ಮಾಡಿಸುವ ಪ್ರಯತ್ನವೂ ವಿಫಲವಾದಾಗ ತಂದೆ ಹತಾಶರಾದರು. ಅಪ್ಪನ ವಿಚಿತ್ರ ವರ್ತನೆ ತನಗೂ ರೇಜಿಗೆ ತರಿಸಿತ್ತು. ಪ್ರೊ. ಭಾಸ್ಕರ್ ಮನದಲ್ಲೇ ಮೆಲುಕು ಹಾಕಿದರು.

ಚಂದ್ರಪ್ಪನವರು ಮಾತು ಮುಂದುವರಿಸಿದರು: 'ಒಬ್ಬ ಮಗಳ ಹೊರತು ನನಗಿನ್ಯಾರಿದ್ದಾರೆ. ಋಣ ತೀರಿಸಲು ಸಿಕ್ಕಿದ ಅವಕಾಶವನ್ನು ಯಾಕೆ ಬಿಡ್ಲೀಂತ ದಿಢೀರನೆ ಈ ತೀರ್ಮಾನಕ್ಕೆ ಬಂದೆ. ಅಂದಹಾಗೆ ನಾನು ಹೊರಟೆ. ಸಿಟಿ ಕಡೆಗೆ ಬರುವವರಲ್ಲವೆ?' ಎಂದರು ಚಂದ್ರಪ್ಪನವರು. ಡಾ. ಚೆಂಗಪ್ಪ ಇಬ್ಬರನ್ನೂ ಬೀಳ್ಕೊಟ್ಟರು. ಅವರವರ ಕಾರಿಗೆ ಹತ್ತುವುದಕ್ಕೆ ಮುಂಚೆ ಚಂದ್ರಪ್ಪನವರು, 'ಇಲ್ಲೇ ನಮ್ಮ ಹುಡುಗನ ಕ್ಲಿನಿಕ್ ಇದೆ. ಅಲ್ಲಿ ಮುಖ ತೋರಿಸಿ, ಮುಂದಕ್ಕೆ ಹೋಗೋಣ' ಎಂದರು.

ಕಾರುಗಳು ಹೊರಟವು. ಡಾ. ಗಣೇಶರ ಕ್ಲಿನಿಕ್ ಮುಂದೆ ಕಾರುಗಳು ನಿಂತವು. ಚಂದ್ರಪ್ಪನವರು ಹಾರ್ನ್ ಮಾಡಿದರು. ಅಟೆಂಡರ್ ಬಂದು ನೋಡಿ ಡಾ. ಗಣೇಶ್‌ರಿಗೆ ತಿಳಿಸಿದ. ಡಾ. ಗಣೇಶ್ ಅವಸರವಾಗಿ ಹೊರಗೆ ಬಂದರು. ಚಂದ್ರಪ್ಪನವರು ಕಾರಿನಿಂದಿಳಿದರು. ಪ್ರೊ. ಭಾಸ್ಕರ್ ಕೂಡ ಹತ್ತಿರ ಬಂದರು. ಚಂದ್ರಪ್ಪನವರು ಪ್ರೊ. ಭಾಸ್ಕರ್‌ರ ಪರಿಚಯ ಮಾಡಿಕೊಟ್ಟರು. 'ಪ್ರೊಫೆಸರ್, ವೀರನಗರದಲ್ಲಿ ಏನು ಕೆಲ್ಸ ಇದ್ರೂ ಇವನ ಹತ್ತಿರ ಹೇಳಿದರಾಯಿತು' ಎಂದರು.

'ನಿಮ್ಮ ಪರಿಚಯವಾದದ್ದಕ್ಕೆ ತುಂಬ ಸಂತೋಷ' ಎಂದರು ಪ್ರೊ. ಭಾಸ್ಕರ್.

'ಬನ್ನಿ, ಒಳಗೆ ಬನ್ನಿ' ಅಂದರು ಡಾ. ಗಣೇಶ್.

'ಬೇಡ ಕಣೋ, ನಿನ್ನ ಬಿಸಿನೆಸ್ ಟೈಮು, ನೀನೇ ಮಧ್ಯಾಹ್ನ ಮನೆಗೆ ಬಂದುಬಿಡು. ಸಾಯಂಕಾಲ ಕ್ಲಿನಿಕ್ ತೆರೆಯೋದ್ರೊಳಗೆ ವಾಪಾಸು ಬರಬಹುದು'.

'ಇವತ್ತು...?'

'ಪ್ರೊ. ಭಾಸ್ಕರ್ ಜೊತೆಗಿರುತ್ತಾರೆ, ಯಾಕೆ?' ಎಂದರು ಚಂದ್ರಪ್ಪನವರು.

'ಸಾರ್...' ಪ್ರೊ. ಭಾಸ್ಕರ್ ಇನ್ನೇನೋ ಹೇಳುವುದಕ್ಕೆ ಹೊರಟರು. ಸಾಧ್ಯವಾಗಲೇ ಇಲ್ಲ. ಚಂದ್ರಪ್ಪನವರ ಕಾರು ಹೊರಟಾಗಿತ್ತು. ಹಿಂದಿನಿಂದ ಪ್ರೊ. ಭಾಸ್ಕರ್. ಎರಡೂ ಕಾರುಗಳು ನವದುರ್ಗಾ ಎಸ್ಟೇಟಿನ ಪೋರ್ಟಿಕೋದಲ್ಲಿ ಬಂದು ನಿಂತಾಗ ಚಂದ್ರಪ್ಪನವರ ಮಗಳು ಶೀಲಾ, ಹೊರಗೆ ಬಂದಳು. ಅಲಂಕಾರವಿನ್ನೂ ಪೂರ್ತಿಯಾಗಿರಲಿಲ್ಲ. ಹೊಸಬರನ್ನು ಕಂಡದ್ದಕ್ಕೆ ಬಂದಷ್ಟೇ ವೇಗವಾಗಿ ಒಳಗಡೆ ಹೋಗುತ್ತಾ, 'ಜಾನಮ್ಮಾ, ಅಪ್ಪ